ಅಧ್ಯಕ್ಷರು : ಸಂಬಂಧಪಟ್ಟ ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಅವರು ಬಂದ ನಂತರ ತಮಗೆ ಅವಕಾಶ ಕೊಡುತ್ತೇನೆಂದರೆ ತಾವು ಏಕೆ ಪ್ರಸ್ತಾಪಿಸುತ್ತೀರಿ?

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : ಖಂಡಿತ ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ ನಾನು ನಿಮ್ಮ ಮಾತಿಗೆ ಗೌರವ ಕೊಡುತ್ತೇನೆ. ಆದರೆ, ಕಳೆದ 3–4 ದಿನದಿಂದ ಪ್ರತಿ ಸಾರಿ ನಮ್ಮ ಸದಸ್ಯರು ಗಮನ ಸೆಳೆಯುವ ಸೂಚನೆ ಕೇಳುವಂಥ ಸಂದರ್ಭದಲ್ಲಿ ಯಾವುದೋ ಒಂದು ಕಾರಣದಿಂದ ಅಲ್ಲಿ ಸಚಿವರು ಇಲ್ಲದೇ ಇರತಕ್ಕಂಥದ್ದು, ಈ ಸರ್ಕಾರದ ಯಾವ ರೀತಿ ವರ್ತಿಸುತ್ತದೆ ಎಂಬುದನ್ನು ತೋರಿಸುತ್ತದೆ. ದಯಮಾಡಿ ಇನ್ನು ಮೇಲಾದರೂ ಕೂಡ ನಾವು ಯಾರಾದರೂ ಸದಸ್ಯರು ಗಮನ ಸೆಳೆಯುವ ಸೂಚನೆ ಕೇಳಿದಾಗ ತಾವು ಪಟ್ಟಿಯಲ್ಲಿ ಯಾವ್ಯಾವ ಟೈಂಗೆ ಯಾವ್ಯಾವುದು ಬರುತ್ತದೆಂದು ಕೊಟ್ಟಾಗಲೂ ಕೂಡ ಸಚಿವರು ಇರುವುದಿಲ್ಲ ವೆಂದರೆ ಹೇಗೆ?

ಅಧ್ಯಕ್ಷರು : ಅವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಅವರು ಬಂದ ನಂತರ ಕರಿತೀನಿ ಎಂದರೂ ನೀವು ಹೀಗೆ ಮಾಡಿದರೆ ಹೇಗೆ?

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : ತಾವು ಟೈಮಿಂಗ್ ಕೊಟ್ಟ ಮೇಲೂ ಸಚಿವರು ಇಲ್ಲಿ ಇರದಿದ್ದರೆ ಹೇಗೆ?

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ನೀವು ಹೇಳಿ.

6. ಗಮನ ಸೆಳೆಯುವ ಸೂಚನೆ :

ಅ) ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ :

ಶ್ರೀ ಯು.ಟಿ. ಖಾದರ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು ಜಿಲ್ಲೆಯ ಆ ಗ್ರಾಮಾಂತರ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರಿನ ಸಮಸ್ಯೆಯಿದ್ದು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರಿನ ಸೌಕರ್ಯ ಒದಗಿಸುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3598 ಜನವಸತಿಗಳಿದ್ದು, ಇವುಗಳಲ್ಲಿ 2968 ಜನವಸತಿಗಳಲ್ಲಿ 40 ರಿಂದ 55ರ ಪ್ರಮಾಣದಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ಸುಮಾರು 630 ಜನವಸತಿಗಳಲ್ಲಿ 20 ರಿಂದ 30 LPCD ನೀರು ಸರಬರಾಜು ಆಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1125 ಕೊಳವೆ ನೀರು ಸರಬರಾಜು ಯೋಜನೆಗಳು, 719 ಕಿರುನೀರು ಸರಬರಾಜು ಯೋಜನೆಗಳು ಮತ್ತು 3938 ಕೈಪಂಪು ಕೊಳವೆ ಬಾವಿಗಳು ಹಾಗೂ ಸುಮಾರು 1250 ತೆರೆದ ಬಾವಿಗಳು ಕಾರ್ಯನಿರ್ವಹಿಸುತ್ತಿವೆ.

2009–10ನೇ ಸಾಲಿಗೆ ಕೇಂದ್ರ ಯೋಜನೆಯಡಿ 268 ಕಾಮಗಾರಿಗಳನ್ನು ಒಳಗೊಂಡ ರೂ.586.23 ಲಕ್ಷಗಳ ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯತ್ ತಯಾರಿಸಿ ಅನುಷ್ಠಾನಗೊಳಿಸುತ್ತಿದೆ. ಅದರಂತೆ, ರಾಜ್ಯ ಯೋಜನೆಯಡಿ ರೂ.866.489 ಲಕ್ಷಗಳ ಕ್ರಿಯಾ ಯೋಜನೆ ತಯಾರಿಸಿ 371 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜಿಲ್ಲೆಗೆ ಪ್ರಸಕ್ತ ಸಾಲಿನಲ್ಲಿ ರೂ.911.00 ಲಕ್ಷ ಅನುದಾನ ಹಂಚಿಕೆಯಾಗಿದ್ದು, ರೂ.727.00 ಲಕ್ಷ ಬಿಡುಗಡೆಯಾಗಿದೆ. ರೂ.400.00 ಲಕ್ಷ ನವೀಕರಣೆ ಸೇರಿಸಿ ಈ ವರೆವಿಗೆ ಒಟ್ಟು ರೂ.1127.00 ಲಕ್ಷ ಅನುದಾನ ಬಿಡುಗಡೆಯಾಗಿದೆ. ಅನುದಾನಕ್ಕೆ ತಕ್ಕಂತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಈಗಾಗಲೇ 155 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇದಲ್ಲದೆ ಕಳೆದ ಮಾರ್ಚ್‌ನಲ್ಲಿ ಜಲಸೇವಾ ನಿಯಂತ್ರಣ ಕೊಠಡಿಯಲ್ಲಿ ಸ್ವೀಕೃತಿಯಾದ ದೂರುಗಳ ಪರಿಹಾರ ಕ್ಕಾಗಿ ಜಿಲ್ಲೆಗೆ ರೂ.100.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಇದರಡಿಯಲ್ಲಿ 78 ಕೊಳವೆ ಬಾವಿ/ತೆರೆದ ಬಾವಿಗಳನ್ನು ರೂ.65.02 ಲಕ್ಷ ಹಾಗೂ ರೂ.34.80 ಲಕ್ಷಗಳ ಅನುದಾನದಲ್ಲಿ 21 ಪೈಪ್‌ಲೈನ್ ವಿಸ್ತರಣಾ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ. ಹಾಗೂ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಂದ ರೂ.35.54 ಲಕ್ಷಗಳ ಪ್ರಸ್ತಾವನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಇದರಲ್ಲಿ ರೂ.23.30 ಲಕ್ಷಗಳ ಅನುದಾನದಲ್ಲಿ 96 ಕೊಳವೆ ಬಾವಿ ಸ್ವಚ್ಛ/ಆಳಗೊಳಿಸಲಾಗಿದೆ. ಹಾಗೂ ಮಂಗಳೂರು ಮತ್ತು ಬಂಟ್ವಾಳ ತಾಲ್ಲೂಕಿನ 26 ಜನವಸತಿಗಳಿಗೆ ರೂ.12.23 ಲಕ್ಷ ಅನುದಾನದಲ್ಲಿ ಬೇಸಿಗೆಯಲ್ಲಿ ಟ್ಯಾಂಕರ್ ಮೂಲಕ ನೀರು ಒದಗಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ 2 ರಿಂದ 3 ಕಿ.ಮೀ. ದಿಂದ ಪ್ರದೇಶದಿಂದ ನೀರು ತರಬೇಕಾಗಿರುವುದು ಹಾಗೂ ವಾರಕ್ಕೊಮ್ಮೆ ನೀರು ಒದಗಿಸಲು ಸಾಧ್ಯವಾಗಿಲ್ಲದಿರುವುದು ಕಂಡು ಬಂದಿರುವುದಿಲ್ಲ. ಬೇಸಿಗೆಯಲ್ಲಿ ಜಿಲ್ಲೆಯ ಮಂಗಳೂರು ತಾಲ್ಲೂಕಿನ 15 ಗ್ರಾಮ ಪಂಚಾಯತ್ ಹಾಗೂ ಬಂಟ್ವಾಳ ತಾಲ್ಲೂಕಿನ 11 ಗ್ರಾಮ ಪಂಚಾಯತ್‌ಗಳಲ್ಲಿ ಹಾಗೂ ಜಿಲ್ಲೆಯ ಕೆಲವೊಂದು ಕಡೆ ನೀರಿನ ಸಮಸ್ಯೆ ಇರುತ್ತದೆ. ಉಪ್ಪು ನೀರಿನ ಪ್ರದೇಶಗಳಿರುವ ಸ್ಥಳಗಳಲ್ಲಿ ಸಮಸ್ಯೆಗಳು ಬರುತ್ತಿದ್ದು ಹಾಗೂ ಬೇಸಿಗೆಯಲ್ಲಿ ಅಂತರ್ಜಲ ನೀರಿನ ಮಟ್ಟ ಕುಸಿದು ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ. ಇಂತಹ ಸ್ಥಳಗಳಲ್ಲಿ ಕುಡಿಯುವ ನೀರಿನ ಜಲಮೂಲಗಳನ್ನು ಮರು ಪೂರಣಮಾಡಿ ಅಂತರ್ಜಲವನ್ನು ಹೆಚ್ಚಿಸುವ ಬಗ್ಗೆ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ. ಈಗಾಗಲೇ ಪ್ರಾಯೋಗಿಕವಾಗಿ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉಂಟಾಗುವ ಮಂಗಳೂರು ತಾಲ್ಲೂಕಿನ ಮುನ್ನೂರು ಹಾಗೂ ಬಂಟ್ವಾಳ ತಾಲ್ಲೂಕಿನ ಕೋಲ್ನಾಡು ಗ್ರಾಮಗಳಲ್ಲಿನ ಜಲಮೂಲಗಳನ್ನು ಜಲಮರುಪೂರಣಗೊಳಿಸಿ ನೀರಿನ ಮೂಲಗಳನ್ನು ಪುನಃಶ್ಚೇತನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಇಲ್ಲಿ ಲ್ಯಾಟರೇಟ್ ಮಣ್ಣು ಇರುವುದರಿಂದ, Roof Top Rain Water Harvesting ವಿಧಾನ ಅಳವಡಿಸಲು ಸಹ ಒತ್ತು ನೀಡಲಾಗುತ್ತಿದೆ.

ಇದಲ್ಲದೆ ಮಂಗಳೂರು ತಾಲ್ಲೂಕಿನ ಮಳವೂರು ಮತ್ತು ಇತರ 10 ಗ್ರಾಮಗಳಿಗೆ ಮತ್ತು ಕಿನ್ನಿಗೋಳಿ ಮತ್ತು ಇತರ 17 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕ್ರಮವಾಗಿ ರೂ.18.19 ಕೋಟಿ ಹಾಗೂ ರೂ.16.80 ಕೋಟಿ ಅಂದಾಜಿನಲ್ಲಿ ಗುರುಪುರ ಮತ್ತು ಶಾಂಭವಿ ನದಿ ನೀರಿನ ಮೂಲಗಳಿಂದ ವೆಂಟೆಡ್ ಡ್ಯಾಂಗಳನ್ನು ನಿರ್ಮಿಸಿ ನೀರು ಸರಬರಾಜು ಮಾಡುವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇದರಿಂದ, ಸಮಸ್ಯಾತ್ಮಕ ಗ್ರಾಮಗಳಿಗೆ ಶಾಶ್ವತ ಪರಿಹಾರ ದೊರಕುವುದೆಂದು ಭಾವಿಸಲಾಗಿದೆ.

(1-30 PM)

ಶ್ರೀ ಯು.ಟಿ. ಖಾದರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈಗ ಉತ್ತರ ಕೊಟ್ಟಿದ್ದಾರೆ. ಆದರೆ, ಅಲ್ಲಿಗೆ ಹೋಗಿ ಆ ಪ್ರದೇಶದ ಜನರನ್ನು ನೋಡಿದರೆ ಅಲ್ಲಿನ ವಾಸ್ತವಾಂಶ ನಮಗೆ ಅರ್ಥವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಒಂದು ಕಡೆ ಅರಬ್ಬಿ ಸಮುದ್ರ ಮತ್ತೊಂದು ಕಡೆ ನೇತ್ರಾವತಿ ನದಿ ಇರುವುದರಿಂದ ಅಲ್ಲಿ ಯಾವುದೇ ರೀತಿಯ ನೀರಿನ ಸಮಸ್ಯೆ ಇಲ್ಲವೆಂದು

ಜನರು ಭಾವಿಸಿಕೊಳ್ಳುತ್ತಾರೆ. ಆದರೆ, ಕನಿಷ್ಠ ವಾರಕ್ಕೊಂದು ಸಾರಿಯಾದರು ಅಲ್ಲಿನ ಜನರಿಗೆ ನೀರು ಇಲ್ಲದಂಥ ಪರಿಸ್ಥಿತಿ ಇದೆ. ಇವತ್ತಿನದಿವಸ ಅಲ್ಲೊಂದು ಬೋರ್‌ವೆಲ್ ಕೊರೆಸಬೇಕಾದರೂ ಅದಕ್ಕೆ ಅನುದಾನ ಇಲ್ಲವೆಂಬ ಮಾತು ಕೇಳಿ ಬರುತ್ತಿದೆ. ಜಲಸೇವಾ ನಿಯಂತ್ರಣ ಕೊಠಡಿಗಾಗಿ ಕಳೆದ ವರ್ಷ 1 ಕೋಟಿ ರೂಪಾಯಿ ಅನುದಾನವನ್ನು ಬಿಡುಗಡೆ ಮಾಡಿದ್ದೀರಿ. ಇದು ಏನಾಗಿದೆ ಎಂದರೆ, ನಮ್ಮಲ್ಲಿ ಒಟ್ಟು 5 ತಾಲ್ಲೂಕುಗಳಿದ್ದು, ಸದರಿ ಹಣದಲ್ಲಿ ಪ್ರತಿಯೊಂದೆ ತಾಲ್ಲೂಕಿಗೆ ಕೇವಲ 20 ಲಕ್ಷ ರೂಪಾಯಿ ಮಾತ್ರ ಬರುತ್ತದೆ. ಈ 20 ಲಕ್ಷ ರೂಪಾಯಿಗಳಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಕೊರೆದು ಅದಕ್ಕೆ ಕರೆಂಟ್ ವ್ಯವಸ್ಥೆ ಹಾಗೂ ಪೈಪ್‌ಲೈನ್ ಮಾಡುವುದಕ್ಕೆ ಆಗುತ್ತದೆ ಎಂಬುದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಕಳೆದ ವರ್ಷ ಕೊರೆಸಿದ ಬೋರ್‌ವೆಲ್‌ಗಳಿಗೆ ಪಂಪ್‌ಸೆಟ್‌ಗಳನ್ನು ಅಳವಡಿಸುವುದಕ್ಕೆ ಇವತ್ತೂ ಕೂಡ ಆಗುತ್ತಿಲ್ಲ. ಮತ್ತೆ ಅಲ್ಲಿ ಟ್ರಾನ್ಸ್‌ಫಾರ್ಮರ್ ಸಂಪೂರ್ಣ ಯೋಜನೆಯಲ್ಲಿ ಕರೆಂಟ್ ಕೊಡುವುದಕ್ಕೆ ಕೆ.ಇ.ಬಿ.ರವರು 50 ಸಾವಿರ ರೂಪಾಯಿ ಕೇಳುತ್ತಿದ್ದಾರೆ. ಇವತ್ತಿನ ದಿವಸ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ನನ್ನ ಕ್ಷೇತ್ರದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟಿದೆ. ಆದ್ದರಿಂದ, ಇದಕ್ಕೆ ವಿಶೇಷವಾದಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂಥ ಕೆಲಸ ಜಿಲ್ಲಾಧಿಕಾರಿಯವರಿಂದ ಆಗಬೇಕು. ಎರಡನೆಯ ವಿಚಾರ ಏನೆಂದರೆ, ಮಂಗಳೂರಿನ ಕೆಐಎಡಿಬಿ ಗೆ ನೇತ್ರಾವತಿ ನದಿಯಿಂದ ನೀರು ಕೊಡುವಂಥ ಯೋಜನೆ ಇದೆ. ಈ ಯೋಜನೆಗೆ ನೀರನ್ನು ಕೊಡುವಂಥ ಸಂದರ್ಭದಲ್ಲಿ ಅಲ್ಲಿನ ಎನ್–ರೂಟ್ ವಿಲೇಜ್‌ಗಳಿಗೆ ಅಂದರೆ ಅಲ್ಲಿನ ಸುತ್ತಮುತ್ತಲು ಬರುವಂಥ ಸುಮಾರು 10–12 ಗ್ರಾಮಗಳಿಗೆ ಕೂಡ ಆ ಸಂದರ್ಭದಲ್ಲಿ ನೀರಿನ ವ್ಯವಸ್ಥೆ ಕೊಡುವುದರ ಬಗ್ಗೆ ಸ್ಪಷ್ಟವಾದ ನಿರ್ದೇಶನ ಮತ್ತು ಅದಕ್ಕೆ ಸೂಕ್ತವಾದ ಅನುದಾನವನ್ನು ಕೊಡಬೇಕು. ಕಳೆದ ಅವಧಿಯಲ್ಲಿ ಶಾಸಕರ ಟಾಸ್ಕ್ ಫೋರ್ಸ್‌ಗೆ 30 ಲಕ್ಷ ರೂಪಾಯಿ ಅನುದಾನವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿರತಕ್ಕಂಥ ವಿಚಾರ ಪತ್ರಿಕೆಗಳಲ್ಲಿ ಬಂತು. ಆ ಸಂದರ್ಭದಲ್ಲಿ ಪಂಚಾಯತ್ ಸದಸ್ಯರೆಲ್ಲರೂ ನಮ್ಮ ಮನೆ ಮುಂದೆ ಬಂದು ಕುಳಿತುಕೊಳ್ಳುವುದಕ್ಕೆ ತಯಾರಾದರು. ಆದರೆ, ಶಾಸಕರ ಟಾಸ್ಕ್ ಫೋರ್ಸ್‌ಗೆ ಕಳೆದ ಸಾಲಿನಲ್ಲಿ ಒಂದು ನಯಾಪೈಸೆ ಕೂಡ ಬಿಡುಗಡೆಯಾಗಲಿಲ್ಲ. ಇನ್ನು ಒಂದು ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಜಂಟಿಲವಾಗುವ ಸಾಧ್ಯತೆ ಇರುವುದರಿಂದ ಒಂದು ಕ್ಷೇತ್ರಕ್ಕೆ

ಕನಿಷ್ಠ 1 ಕೋಟಿ ರೂಪಾಯಿ ಶಾಸಕರ ಟಾಸ್ಕ್ ಫೋರ್ಸ್‌ಗೆ ಬಿಡುಗಡೆ ಮಾಡಿದರೆ ಎಲ್ಲಿ ಅತ್ಯಾವಶ್ಯಾಕವಾಗಿ ಬೇಕಾಗುತ್ತದೆಯೋ ಅಂಥ ಕಡೆ ಜನರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತಾ ಶಾಶ್ವತವಾದ ಸರ್ಫೇಸ್ ವಾಟರ್ ಡ್ರಿಕಿಂಗ್ ಯೋಜನೆಗೆ ಚಾಲನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಅಭಯಚಂದ್ರ ಜೈನ್ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಗೆ ಕಳೆದ ವರ್ಷ ಟಾಸ್ಕ್ ಫೋರ್ಸ್‌ಗ ಹಣ ಕೊಟ್ಟಿಲ್ಲ. ಮತ್ತೆ ಕೇಂದ್ರ ಸರ್ಕಾರದ 12ನೇ ಹಣಕಾಸಿನ ಆಯೋಗದ ಯೋಜನೆಗಳನ್ನೂ ಸಹ ಅಲ್ಲಿ ಕೈಬಿಡಲಾಗಿದೆ. ಈ ಒಂದು ಹಿನ್ನೆಲೆಯಿಂದ ಅಲ್ಲಿ ಕುಡಿಯುವ ನೀರಿನ ಯೋಜನೆಗಳ ಯಾವುದೇ ಕಾಮಗಾರಿಗಳು ಇವತ್ತಿನದಿವಸ ಆಗುತ್ತಿಲ್ಲ. ಆದ್ದರಿಂದ, ಅದಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕು. ಮಳವೂರು ವೆಂಟೆಡ್ ಡ್ಯಾಂಗೆ ಪ್ರಸ್ತಾವನೆ ಕೊಡಿ ಎಂದು ಹೇಳಿದ್ದಾರೆ. ಆದರೆ, ಮಳವೂರು ವೆಂಟೆಡ್ ಡ್ಯಾಂಗ್ ಪ್ರಸ್ತಾವನೆ ಕೊಟ್ಟು 6 ವರ್ಷಗಳಾಗಿವೆ. ಇದುವರೆಗೂ ಅದಕ್ಕೆ ಚಾಲನೆ ಸಿಕ್ಕಿಲ್ಲ. ಅದೇ ರೀತಿಯಾಗಿ ಕಿನ್ನಿಗೋಳಿಯ 10 ಗ್ರಾಮಗಳಿಗೆ ಸಂಬಂಧಪಟ್ಟಂಥ ಕುಡಿಯುವ ನೀರಿನ ಯೋಜನೆ ಸರ್ಕಾರದ ಮುಂದೆ ಇದ್ದರೂ ಕೂಡ ಇವತ್ತಿನವರೆಗೆ ಯಾವುದೇ ರೀತಿಯ ಪ್ರಗತಿ ಆಗಿಲ್ಲ. ಆದ್ದರಿಂದ, ಇವುಗಳು ಶೀಘ್ರಗತಿಯಲ್ಲಿ ಆಗುವಂತೆ ನೋಡಿಕೊಳ್ಳಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಶಾಸಕರ ಟಾಸ್ಕ್ ಫೋರ್ಸ್‌ಗೆ ಪ್ರತಿಯೊಬ್ಬ ಶಾಸಕರಿಗೆ 1 ಕೋಟಿ ರೂಪಾಯಿ ಕೊಟ್ಟರೆ ಮಾತ್ರ ಈ ಸಲ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಈಗ ನಾವು ಡಿಸೆಂಬರ್ ತಿಂಗಳಲ್ಲಿದ್ದೇವೆ. ಈಗಲೇ ನೀರಿನ ಹಾಹಾಕರ ಅಲ್ಲಿ ಪ್ರಾರಂಭವಾಗಿದೆ. ಆದ್ದರಿಂದ, ಇದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ದಯಮಾಡಿ ಚಿಂತನೆ ಮಾಡಬೇಕು. ಮತ್ತೆ ಒಂದು ಸಭೆಯನ್ನು ಕರೆದು ದಕ್ಷಿಣ ಕನ್ನಡ ಜಿಲ್ಲೆಯ ಕುಡಿಯುವ ನೀರಿನ ಬಗ್ಗೆ ಸ್ವಲ್ಪ ನಿಗಾ ವಹಿಸಿದರೆ ಒಳ್ಳೆಯದು. ನೆನ್ನೆದಿವಸ ಮಾನ್ಯ ಯೋಗೀಶ್ ಭಟ್‌ರವರು ಪಶ್ಚಿಮ ವಾಹಿನಿ ಬಗ್ಗೆ ಮಾತನಾಡಿದರು. ವಾಹಿನಿಗೆ ವೆಂಟೆಂಡ್ ಡ್ಯಾಂಗಳನ್ನು ಮಾಡಿದರೆ ಮಾತ್ರ ನಮ್ಮಲ್ಲಿ ನೀರನ್ನು ಶೇಖರಣೆ ಮಾಡುವುದಕ್ಕೆ ಆಗುತ್ತದೆ. ಆದ್ದರಿಂದ, ಪಶ್ಚಿಮ ವಾಹಿನಿಯ ಬಗ್ಗೆ ಕೂಡ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂತೆ ಉಡುಪಿ ಜಿಲ್ಲೆಗೂ ಕೂಡ ಕುಡಿಯುವ ನೀರಿಗಾಗಿ ಕಳೆದ ವರ್ಷ ಮತ್ತು ಈ ವರ್ಷ ಕೂಡ ಹಣ ಬಿಡುಗಡೆಯಾಗಲಿಲ್ಲ. ನಮಗೆ ಹಣ ಬರುತ್ತದೆಂಬ ನಿರೀಕ್ಷೆಯಿಂದ ಸುಮಾರು 3–4 ಕೋಟಿ ರೂಪಾಯಿಗಳಷ್ಟು ಸ್ಟಿಲ್‌ಓವರ್ ಕೆಲಸವನ್ನು ಜಿಲ್ಲಾ ಪಂಚಾಯತ್‌ನಲ್ಲಿ ಮಾಡಲಾಗಿದೆ. ಈ ವರ್ಷ ಸ್ಟಿಲ್‌ಓವರ್ ಕೆಲಸಕ್ಕೆ ಕೊಡುವುದಕ್ಕೂ ಈ ಸಾರಿ ಹಣ ಇಲ್ಲ. ಮತ್ತೆ ಈ ವರ್ಷ ಹೊಸದಾಗಿ ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಆದ್ದರಿಂದ, ಉಡುಪಿ ಜಿಲ್ಲೆಗೆ ಅಥವಾ ಟಾಸ್ಕ್ ಫೋರ್ಸ್‌ಗೆ ಹಣ ಬಿಡುಗಡೆ ಮಾಡಿದರೂ ತೊಂದರೆ ಇಲ್ಲ. ಅಂದರೆ, ಶಾಸಕರ ಅಧ್ಯಕ್ಷತೆಯಲ್ಲಿರುವ ಟಾಸ್ಕ್ ಫೋರ್ಸ್‌ಗೆ ಹೆಚ್ಚಿಗೆ ಹಣ ಕೊಡಿ. ಏಕೆಂದರೆ, ನಮ್ಮ ಜಿಲ್ಲೆಯಲ್ಲಿ ಹೊಸ ಯೋಜನೆಗಳನ್ನು ಮಾಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ದಯವಿಟ್ಟು ಉಡುಪಿ ಜಿಲ್ಲೆಯ ಬಗ್ಗೆ ಕೂಡ ಗಮನಹರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ಕೆಲವು ಕಡೆ ಬೋರ್‌ವೆಲ್‌ಗಳು ಫೇಲ್ಯೂರ್ ಆಗುತ್ತವೆ. ಆದ್ದರಿಂದ ಅಲ್ಲಿ ತೆರೆದ ಬಾವಿಗಳನ್ನು ಮಾಡಿದರೆ ಕುಡಿಯುವ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ತೆರೆದ ಬಾವಿಗಳನ್ನು ಮಾಡುವುದಕ್ಕೆ ಜಿಲ್ಲಾ ಪಂಚಾಯತ್‌ನ ಕ್ರಿಯಾ ಯೋಜನೆಯಲ್ಲಿ ಸೇರಿಸಬೇ ಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆ ಎಲ್ಲರೂ ಕೇಳಿದರೆ ಹೇಗೆ?

ಶ್ರೀ ಕೆ. ಗೋಪಾಲ ಭಂಡಾರಿ : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಗೂ ಕೂಡ ಇದೇ ಸಮಸ್ಯೆಯಾಗಿದೆ. ಆದ್ದರಿಂದ, ಟಾಸ್ಕ್ ಫೋರ್ಸ್‌ಗೆ ದಯವಿಟ್ಟು ಹೆಚ್ಚು ಹಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಯು.ಟಿ. ಖಾದರ್ ಮತ್ತು ಇನ್ನಿತರ ಶಾಸಕರು ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳ ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ಯಾವ್ಯಾವ ಯೋಜನೆಗಳನ್ನು ನಾವು ಜಾರಿಗೆ

ತೆಗೆದುಕೊಂಡು ಬಂದಿದ್ದೇವೆಂಬುದರ ಬಗ್ಗೆ ಕೂಡ ಸ್ಪಷ್ಟವಾಗಿ ಪೂರ್ಣವಾಗಿ ಮಾಹಿತಿಯನ್ನು ಈಗಾಗಲೇ ಕೊಟ್ಟಿದ್ದೇವೆ. ಟಾಸ್ಕ್ ಫೋರ್ಸ್‌ಗೆ ಹಣ ಬಿಡುಗಡೆಯಾಗಿಲ್ಲವೆಂದು ಮಾನ್ಯ ಖಾದರ್‌ರವರು ಮತ್ತು ಮಾನ್ಯ ಅಭಯಚಂದ್ರ ಜೈನ್‌ರವರು ಹಾಗೂ ಇನ್ನಿತರ ಶಾಸಕರು ಈಗ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ತಕ್ಷಣವೇ ಕ್ರಮಕೈಗೊಳ್ಳುತ್ತೇನೆ. ವೆಂಟೆಂಡ್ ಡ್ಯಾಂಗಳು ಸಹ ಬಹಳ ದಿವಸದಿಂದ ನೆನೆಗುದಿಗೆ ಬಿದ್ದಿವೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ಸಭೆ ಕರೆದು ನಾವು ಕೈಗೊಂಡಿರುವ ಯೋಜನೆಗಳು ಅನುಷ್ಠಾನ ವಾಗಬೇಕು ಮತ್ತು ಅದಕ್ಕೆ ಹಣ ಬಿಡುಗಡೆಯಾಗಬೇಕಾಗಿರುವುದರಿಂದ ಇದಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತೇನೆ. ಮತ್ತೆ ನಾನು ಉತ್ತರದಲ್ಲಿ ಹೇಳಿದ ಪ್ರಕಾರ ಮಳವೂರು ಮತ್ತು ಇತರ 10 ಗ್ರಾಮಗಳಿಗೆ ಮತ್ತು ಕಿನ್ನಿಗೋಳಿ ಮತ್ತು ಇತರ 17 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಈಗಾಗಲೇ 18.19 ಕೋಟಿ ರೂ ಮತ್ತು 16.80 ಕೋಟಿ ರೂ ಅಂದಾಜಿನಲ್ಲಿ ಗುರುಪುರ ಮತ್ತು ಶಾಂಭವಿ ನದಿ ನೀರಿನ ಮೂಲಗಳಿಂದ ಮಾಡುವಂಥ ಯೋಜನೆ ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿದೆ ಎಂದು ಹೇಳಿದ್ದೀರಿ. ಇದನ್ನು ಆದಷ್ಟು ಬೇಗ ಅನುಷ್ಠಾನಗೊಳಿಸುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ನಾನು ಕೈಗೊಳ್ಳುತ್ತೇನೆಂದು ಹೇಳುತ್ತಾ ತಾವು ಪ್ರಸ್ತಾಪ ಮಾಡಿರುವಂಥ ಇನ್ನಿತರ ವಿಷಯಗಳ ಬಗ್ಗೆ ಕೂಡ ಹೆಚ್ಚಿನ ಆದ್ಯತೆ ಕೊಟ್ಟು ಬರುವಂಥ ದಿವಸಗಳಲ್ಲಿ ಕುಡಿಯುವ ನೀರಿಗೆ ಯಾವುದೇ ರೀತಿಯ ತೊಂದರೆ ಆಗದ ರೀತಿಯಲ್ಲಿ ನಾನು ಗಮನ ಹರಿಸುತ್ತೇನೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಮಾಲೀಕಯ್ಯ ವಿ. ಗುತ್ತೇದಾರ್‌ರವರೆ, ತಾವು ಕೇಳಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುವುದಕ್ಕೆ ಮಾನ್ಯ ಸಚಿವರು ಈಗ ಇಲ್ಲ. ಆದ್ದರಿಂದ, ಮಂಗಳವಾರ ದಿವಸ ನಿಮಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವವಾದ ಪ್ರಶ್ನೆಯಾಗಿದೆ. ಅಲ್ಲಿ ಪ್ರತಿ ತಿಂಗಳು ಸುಮಾರು ನಾಲ್ಕೈದು ಸಾವಿರ ಚೀಲ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ. ಇದರ ಬಗ್ಗೆ ಒಂದು ದೊಡ್ಡ ಜಾಲವೇ ಇದೆ. ಇದರ ಬಗ್ಗ ಸರ್ಕಾರಕ್ಕೆ ಸೀರಿಸ್‌ನೆಸ್ ಇಲ್ಲವೆಂದರೆ ಹೇಗೆ?

ಅಧ್ಯಕ್ಷರು : ಮಂಗಳವಾರ ಇದಕ್ಕೆ ಉತ್ತರ ಕೊಡಿಸುತ್ತೇನೆ.

ಶ್ರೀ ಮಾಲೀಕಯ್ಯ ಎ.ಗುತ್ತೇದಾರ್ : ಯಾರಾದರೊಬ್ಬರು ಸಚಿವರು ಜವಾಬ್ದಾರಿ ವಹಿಸಿಕೊಂಡು ಉತ್ತರ ಕೊಡಲಿ. ಇದರ ಬಗ್ಗೆ ಸಮಗ್ರವಾಗಿ ತನಿಖೆ ಕೂಡ ಆಗಬೇಕು. ತನಿಖೆ ಆದರೆ ಇದರಲ್ಲಿನ ಸತ್ಯಾಂಶ ಹೊರಕ್ಕೆ ಬರುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಂಗಳವಾರ ಮೊದಲನೆಯದಾಗಿ ಅವರ ಪ್ರಶ್ನೆಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಮಾಲೀಕಯ್ಯ .ಎಗುತ್ತೇದಾರ್ : ಮೊದಲನೆಯದಾಗಿ ತೆಗೆದು ಕೊಂಡು ಉತ್ತರ ಕೊಡಿಸುತ್ತೀರಾ?

ಅಧ್ಯಕ್ಷರು : ಖಂಡಿತ ಕೊಡಿಸುತ್ತೇನೆ.

ಆ) ವಿಷಯ : ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ ನೀಡುವ ಬಗ್ಗೆ :

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) (ದೇವರ ಹಿಪ್ಪರಗಿ) : ಮಾನ್ಯ ಅಧ್ಯಕ್ಷರೆ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ ನೀಡುವ ಬಗ್ಗೆ ಮಾನ್ಯ ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಯೋಜನೆ ಸಾಂಖ್ಯಿಕ ಸಚಿವರು) : ಮಾನ್ಯ ಅಧ್ಯಕ್ಷರೆ,

ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನದ ವಿವರ :

(ಲಕ್ಷಗಳಲ್ಲಿ)

2006–07		2007–08		2008–09		2009–10	
ಆಯವ್ಯಯದಲ್ಲಿ ಒದಗಿಸಿರುವ ಅನುದಾನ	ಬಿಡುಗಡೆಯಾದ ಅನುದಾನ	ಆಯವ್ಯಯದಲ್ಲಿ ಒದಗಿಸಿರುವ ಅನುದಾನ	ಬಿಡುಗಡೆಯಾದ ಅನುದಾನ	ಆಯವ್ಯಯದಲ್ಲಿ ಒದಗಿಸಿರುವ ಅನುದಾನ	ಬಿಡುಗಡೆಯಾದ ಅನುದಾನ	ಆಯವ್ಯಯದಲ್ಲಿ ಒದಗಿಸಿರುವ ಅನುದಾನ	ಬಿಡುಗಡೆಯಾದ ಅನುದಾನ
700.00	700.00	1470.00	1282.50	1220	610.00	1000.00	272.50

ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ 2008–09ನೇ ಸಾಲಿನ ಆಯವ್ಯಯದಲ್ಲಿ ರೂ.1220.00 ಲಕ್ಷ ಅನುದಾನದಲ್ಲಿ ರೂ.610.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಬಾಕಿ ಇರುವ ಎಲ್ಲಾ ಕಾಮಗಾರಿ